## ಪೋಷಕರೇ ಅಸಹಾಯಕರು!

‘ಮಕ್ಕಳ ಗೀಳು ಪೋಷಕರ ಗೋಳು’ (ಸೆ. 11, ಸುಶೀಲಾ ಡೋಣೂರ) ಮುಖಪುಟ ಲೇಖನ ಸಮಕಾಲೀನ ತುರ್ತು ಪರಿಸ್ಥಿತಿಯ ಜರೂರತ್ತನ್ನು ವಿವರಿಸಿದೆ. ಮೊಬೈಲ್ ಫೋನುಗಳು, ಸಾಮಾಜಿಕ ಜಾಲತಾಣಗಳು ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಹಾಳುಗೆಡವುತ್ತಿದೆ. ಅವರ ಭವಿಷ್ಯವನ್ನು ಕಸಿದುಕೊಳ್ಳುತ್ತಿದೆ. ಪೋಷಕರು ಅಸಹಾಯಕರಾಗಿ ಇರಬೇಕಾದ ಸ್ಥಿತಿ ಒದಗಿಬಂದಿದೆ. ಇದು ಈ ಕಾಲದ ದುರಂತ ಎಂದರೆ ತಪ್ಪಿಲ್ಲ.

—ರೇಶ್ಮಾ ಗುಳೇದಗುಡ್ಡಾಕರ್

## ಎಲ್ಲಿದೆ ಸಹಜ ಕುತೂಹಲ?

ಒಮ್ಮೆ ಸಾಮಾಜಿಕ ಜಾಲತಾಣಗಳ ಮೇಲೆ ಅವಲಂಬಿತರಾದರೆ ಅದರ ಪಾಶದಿಂದ ಬಿಡಿಸಿಕೊಳ್ಳುವುದು ಕಷ್ಟ. ಅದರಲ್ಲೂ ಮಕ್ಕಳ




ಮನಸ್ಸು ಬೇಗ ಅದರೆಡೆಗೆ ಆಕರ್ಷಿತವಾಗುತ್ತದೆ. ಅದೇ ಒಂದು ಚಟವಾಗಿ ಆವರಿಸಿಕೊಳ್ಳುತ್ತಿದೆ. ಮಕ್ಕಳಲ್ಲಿರಬೇಕಾದ ಸಹಜ ಕುತೂಹಲವೂ ಅವರಲ್ಲಿ ಉಳಿಯದಂತಾಗಿದೆ. ಸಾಮಾಜಿಕ ಜಾಲತಾಣಗಳ ಮಾರುಕಟ್ಟೆಯಲ್ಲಿ ಎಲ್ಲವೂ, ಎಲ್ಲರೂ ಸರಕುಗಳೇ. ಶಾಲಾ ಕಾಲೇಜು ಮಕ್ಕಳು ಇವುಗಳಲ್ಲೇ ಮುಳುಗಿ ಕಳೆದುಹೋಗಿದ್ದಾರೆ. ಅವರನ್ನು ಹೊರತರುವ ದಾರಿ ಯಾವುದು?

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

## ಮನೆ ಮನೆಯ ಸಮಸ್ಯೆ

ಇದು ಎಲ್ಲರ ಮನೆಯ ಸಮಸ್ಯೆ. ಪ್ರಸ್ತುತ ಸಮಾಜದ ಗಂಭೀರ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿದ ಲೇಖನ. ಕೆಲವು ಪರಿಹಾರೋಪಾಯಗಳನ್ನೂ ಸೂಚಿಸಿರುವುದು ಸೂಕ್ತವಾಗಿದೆ. ಪೋಷಕರು ಮಗುವನ್ನು ವಾತ್ಸಲ್ಯದಿಂದ ಕಂಡು, ಮಗುವಿನ ಅಂದಂದಿನ ಶಾಲಾ ಅಭ್ಯಾಸದ ಬಗ್ಗೆ ಗಮನಹರಿಸಬೇಕಿದೆ. ಮಕ್ಕಳ ಮೇಲೆ ನಿಗಾ ಇಡಬೇಕಾಗಿದೆ. ಆಗ ಈ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಹುದು. ಮಕ್ಕಳ ಕೈಗೆ ಮಕ್ಕಳ ಸಾಹಿತ್ಯ ಪುಸ್ತಕಗಳನ್ನು ನೀಡಬಹುದು. ಕನ್ನಡದಲ್ಲಿ ಶ್ರೇಷ್ಠ ಮಕ್ಕಳ ಸಾಹಿತ್ಯವೂ ಇದೆಯಲ್ಲವೇ? ಅದರ ಬಳಕೆಯಾಗಲಿ. ಮಕ್ಕಳ ಮನಸ್ಸು ಪುಸ್ತಕಗಳತ್ತ ವಾಲಲಿ, ಮೊಬೈಲ್ ಬಿಡಲಿ.

—ಹುರುಕಡ್ಲಿ ಶಿವಕುಮಾರ
ಬಾಚಿಗೊಂಡನಹಳ್ಳಿ

## ಸುಂದರ ಚಿತ್ರಪಟ

‘ಬಿಸಿಲೆಯ ಡ್ರೋಣ್ ನೋಟ’ (ಸೆ.11, ಶರತ್ ಹೆಗ್ಡೆ, ಕಡ್ತಲ) ಚಿತ್ರಪಟ ಕಥನ ಸುಂದರವಾಗಿದೆ. ಬಿಸಿಲೆಯ ಕುರಿತ ವಿವರಣೆ ಮತ್ತು ಫೋಟೊಗಳು ನಾವೇ ಬಿಸಿಲೆ ನೋಡಿದಂಥ ಅನುಭವ ಕಟ್ಟಿಕೊಟ್ಟವು. ಜಗದೀಶ ಬಿ. ಪುತ್ತೂರು ಅವರ ಚಿತ್ರಗಳು ಬಹಳ ಸುಂದರವಾಗಿವೆ.

—ನೀಲಕಂಠಪ್ಪ ಚಿಕ್ಕಮುದ್ದೆ ಬೀರೂರು



## ಡ್ರೋಣ್ ಕಣ್ಣ ನೋಟದಲ್ಲಿ...

ಪ್ರಕೃತಿ ಸೌಂದರ್ಯವನ್ನು ಕಣ್ಮುಂದೆ ತಂದು, ಈ ಸಮಯದಲ್ಲಿ ಒಮ್ಮೆಯಾದರೂ ಮಲೆನಾಡಿಗೆ ಭೇಟಿ ನೀಡಲೇಬೇಕೆಂದು ಪ್ರೇರೇಪಿಸಿತು. 2 ವರ್ಷದ ಹಿಂದೆ ಮೈಸೂರಿನಿಂದ ಸುಬ್ರಹ್ಮಣ್ಯಕ್ಕೆ ಹೋಗುವಾಗ ಇದೇ ದಾರಿ ಆರಿಸಿಕೊಂಡಿದ್ದೆ. ಈ ಸೌಂದರ್ಯ ಕಣ್ತುಂಬಿಕೊಳ್ಳಲು ಎರಡು ಕಣ್ಣಿನ ಜೊತೆಗೆ ಮೊಬೈಲ್ ಕಣ್ಣೂ ಸಾಲದು. ಡ್ರೋಣ್ ಕಣ್ಣೂ ಇದ್ದರೆ ಚೆನ್ನಾಗಿತ್ತು ಎಂದು ಅನಿಸಿತ್ತು. ಈ ಲೇಖನ ಆ ಆಸೆ ಪೂರೈಸಿತು.

—ಮಾಧವ ಉದ್ಯಾವರ, ಮೈಸೂರು

## ಕನಸು ಸಾಕಾರವಾಗಲಿ

‘ಭೀಮ ಸ್ವಗತ’ (ಸೆ. 11, ಎಂ. ಮಹೇಶ್) ಆಪ್ಯಾಯಮಾನವಾಗಿದೆ. ಪ್ರಾಣಿ ಪ್ರೀತಿ, ಅರಣ್ಯ ಇಲಾಖೆ ಸಿಬ್ಬಂದಿಯ ಕಾಳಜಿ, ಕಾರುಣ್ಯ ಮುಂತಾದ ಎಲ್ಲಾ ಗುಣಗಳೂ ಎದ್ದು ತೋರುತ್ತಿವೆ. ಭೀಮನ ಗಾತ್ರ, ತೂಕ ಹಾಗೂ ದಂತ ಸೌಂದರ್ಯ ಮಕ್ಕಳ ಪ್ರೀತಿಗೂ ಪಾತ್ರವಾಗಿವೆ. ಚಿನ್ನದ ಅಂಬಾರಿ ಹೊರುವ ಭೀಮನ ಕನಸು ಸಾಕಾರವಾಗಲಿ!

—ಜಿ. ಸುಬ್ರಹ್ಮಣ್ಯ, ಬೆಂಗಳೂರು

## ಶಾಲೆಯಲ್ಲೂ ಕಾಳಜಿ ಅಗತ್ಯ

‘ಮಯೋಪಿಯಾ; ನಿವಾರಣೆಗೇನು ಉಪಾಯ?’ (ಸೆ. 11, ಉಮಾ ಅನಂತ್) ಆರೋಗ್ಯ ಲೇಖನ ಉಪಯುಕ್ತವಾಗಿದೆ. ಬೆಂಗಳೂರಿನಂಥ ನಗರವಾಸಿಗಳಿಗೆ ಆಫೀಸಿಗೆ ಹೋಗಿ ಬರುವುದೇ ಸಾಹಸ. ಬೆಳಿಗ್ಗೆ ಮನೆ ಬಿಟ್ಟರೆ ರಾತ್ರಿ ಮನೆ ಸೇರುವುದು. ಮನೆಯಲ್ಲಿ ಒಂದು ಎರಡು ಮಕ್ಕಳು. ಅಪಾರ್ಟ್ಮೆಂಟ್ ಒಳಗೆ ಅಜ್ಜಿ ತಾತ ಆಯಾ ಜೊತೆ ಇರುವರು. ಮಕ್ಕಳನ್ನು ಸಮಾಧಾನ ಮಾಡಲು ಮೊಬೈಲ್ ಕೊಟ್ಟರಂತೂ ನೆಮ್ಮದಿ. ಪರಿಣಾಮ ಮಗುವಿನ ಮೇಲೆ ಬಿದ್ದಾಗ ತಾಯಿ ತಂದೆಯರ ಪರದಾಟ ಹೇಳಲಾರದು. ಇದರ ಬಗ್ಗೆ ಶಾಲೆಗಳಲ್ಲಿಯೂ ಕಾಳಜಿ ವಹಿಸಬೇಕು.

—ಹೀರಾ ರಮಾನಂದ್, ಬೆಂಗಳೂರು

## ಆಸಕ್ತಿದಾಯಕ ಬರಹ

‘ಎಲ್ಲಾದರೂ ಕಂಡಿರಾ ಸೋನೆ ಕುದುರೆ ಆಟವಾ...’ (ಸೆ. 11, ಪ್ರಕಾಶ್ ಕಂದಕೂರ) ಲೇಖನ ಚೆನ್ನಾಗಿದೆ. ಮಾರ್ವಾರ್ ತಳಿಗೆ ಸೇರಿದ ಶ್ವೇತವರ್ಣದ ಕುದುರೆಯ ಲಗಾಮು, ಮೂಗುಪಟ್ಟಿ, ಹೆಡ್‌ಪೀಸ್, ಬಣ್ಣದ ಥಡಿ, ತುರಾಯಿ, ಮೂರ್ಚಿ, ಧೂಲಾ, ನೆಕ್ಲೆಸ್, ಚೇರ್ ಬಂದ್ ಅಲಂಕಾರದೊಂದಿಗೆ ಉತ್ತರ ಕರ್ನಾಟಕದಲ್ಲಿ ಕಂಡುಬರುವ ಕಾರ್ಯಕ್ರಮದ ಬರಹ ಆಸಕ್ತಿದಾಯಕವಾಗಿತ್ತು.

—ಪರಮೇಶ್ವರ ಜೆ.ಎಂ., ಸಂಡೂರು

## ವಿಭಿನ್ನ ನಿರೂಪಣೆ

‘ಗಿಲ್ಟ್ ಟ್ರಿಪ್’ (ಸೆ. 11, ಪೂರ್ಣಿಮಾ ಮಾಳಗಿಮನಿ) ಕಥೆ ವಿಭಿನ್ನ ನಿರೂಪಣೆಯಿಂದ ಕೂಡಿದೆ. ಈ ಕಥೆಯ ನಾಯಕಿ ಇಶಿಕಾ ಪಾತ್ರವನ್ನು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ. ಒಟ್ಟಾರೆ ಒಳ್ಳೆಯ ಪ್ರಯತ್ನ.

—ರಾಜೇಂದ್ರ, ಬೆಂಗಳೂರು

## ಕಾಡಿದ ಕಥೆ

ನನ್ನನ್ನು ಕಥೆ ಬಹುವಾಗಿ ಕಾಡಿತು. ಅತೃಪ್ತ ಜೀವಗಳ ಹತಾಶೆಯ ದುಷ್ಪರಿಣಾಮಗಳು, ಹೆಣ್ಣಿನ ಮನಸು ಹೆಣ್ಣಿಗಷ್ಟೇ ಅರಿವಾಗುತ್ತದೆ ಎಂಬುದು ಕಥೆಯಲ್ಲಿ ನಿರೂಪಿತವಾಗಿರುವ ರೀತಿ ಚೆನ್ನಾಗಿದೆ. ಭಾಸ್ಕರ್ ಅವರ ಚಿತ್ರಕಲೆ ಬಹಳ ಸುಂದರವಾಗಿದೆ.

—ಕೆ.ಎಂ. ಮಧ್ವರಾಯ, ಬೆಂಗಳೂರು



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in